**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 12.04.2023.**

1) ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ, ಆದ್ದರಿಂದ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

2) **ಮುಂದುವರೆದ ಮುಖ್ಯ ವಿಚಾರಣೆ - ವಾದಿ ಪರ ವಕೀಲರಿಂದ.**

3) ಸಾಕ್ಷಿಯ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿಯಲ್ಲಿ ನೀಡಿರುವ ಕ್ರಮಸಂಖ್ಯೆಯಂತೆ - ನೋಟರಿ ವಂಶವೃಕ್ಷವನ್ನು ನಿಪಿ-1 ಎಂದು, ದೃಢೀಕೃತ ಟಿಪ್ಪಣಿ ನಕಲು ನಿಪಿ-2 ಎಂದು, ದೃಢೀಕೃತ ಕರ್ದಾ ನಕಲು ನಿಪಿ-3 ಎಂದು, ದೃಢೀಕೃತ ಅಟ್ಲಾಸ್ ನಕಲು ನಿಪಿ-4 ಎಂದು, ಸರ್ವೆ ನಂ.4 ರ ಹಿಸ್ಸೆಗಳ ದೃಢೀಕೃತ ಆರ್.ಆರ್. ನಕಲುಗಳನ್ನು ನಿಪಿ-5 ರಿಂದ ನಿಪಿ-11 ಎಂದು, ಆಕಾರ ಬಂದ ಉತಾರು ನಿಪಿ-12 ಎಂದು, ಹಿಂಬರಹವನ್ನು ನಿಪಿ-13 ಎಂದು, ದೃಢೀಕೃತ ಕೈ ಬರಹ ಪಹಣಿಗಳನ್ನು ನಿಪಿ-14 ರಿಂದ ನಿಪಿ-17 ಎಂದು ಗುರುತಿಸಲಾಯಿತು. ವಾದಿಗಳ ಪರ ವಕೀಲರು ಮುಂದುವರೆದ ದಾಖಲೆಗಳನ್ನು ಗುರುತಿಸಲು ಕಾಲಾವಕಾಶ ಕೋರಿದ್ದು, ಈಗಾಗಲೇ ವಾದಿಗಳು ಮಾಡಿರುವ ಕಾಲಹರಣವನ್ನು ಮತ್ತು 2007 ರ ದಾವೆಯಲ್ಲಿ 2023 ರಲ್ಲಿ ಸಾಕ್ಷಿ ನೀಡುತ್ತಿರುವ ಕಾರಣ, ವಿನಂತಿ ನಿರಾಕರಿಸಿ ಪಾಟೀ ಸವಾಲಿಗೆ ಇರಿಸಲಾಗಿದೆ.

**ಪಾಟೀ ಸವಾಲು - ಸಮಯ ಕೋರಿದ್ದು ಮುಂದೂಡಿತು.**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**